ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿಸಿ025521
**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

ಸಂಖ್ಯೆ: ಕವಿಪ್ರನಿನಿ/ಬಿ110/37111/2022-23 ದಿನಾಂಕ: 21 JUL 2022

## ಸುತ್ತೋಲೆ

**ವಿಷಯ :** **ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಮನೆ ಮನೆಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ಬಗ್ಗೆ.**

**ಉಲ್ಲೇಖ :**
1. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಇಎನ್ 19 ಅಪಕಾ 2022 ದಿನಾಂಕ: 17.06.2022.
2. ನಿಗಮದ ಸುತ್ತೋಲೆ ಸಂಖ್ಯೆ:ಕವಿಪ್ರನಿನಿ/ಬಿ9/21481/2021-22 ದಿನಾಂಕ:18.07.2022.
3. ಕವಿಪ್ರನಿ ನೌಕರರ ಸಂಘ ರವರ ಪತ್ರ ದಿನಾಂಕ:15-07-2022.
4. ಕವಿಮಂ ಇಂಜಿನಿಯರುಗಳ ಸಂಘ ರವರ ಪತ್ರ ದಿನಾಂಕ:21-07-2022.
5. ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ ರವರ ಪತ್ರ ದಿನಾಂಕ:21-07-2022.
6. ಕೆ.ಪಿ.ಟಿ.ಸಿ.ಎಲ್. ಡಿಪ್ಲೊಮ ಇಂಜಿನಿಯರ್ಸ್ ಅಸೋಸಿಯೇಶನ್ ರವರ ಪತ್ರ ದಿನಾಂಕ: 21-07-2022.
7. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ ಕೇಂದ್ರ ಸಮಿತಿ ರವರ ಪತ್ರ ದಿನಾಂಕ: 20.07.2022.

*********

ಮಾನ್ಯ ಕೇಂದ್ರ ಸರ್ಕಾರದ ಸಾಂಸ್ಕೃತಿಕ ಮಂತ್ರಾಲಯದ ನಿರ್ದೇಶನದನ್ವಯ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ **'ಮನೆ ಮನೆಯಲ್ಲಿ ರಾಷ್ಟ್ರಧ್ವಜ'** ಎಂಬ ಶೀರ್ಷಿಕೆ ಅಡಿಯಲ್ಲಿ ರಾಜ್ಯದ ಎಲ್ಲಾ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ಕಾರ್ಯಕ್ರಮದ ಭಾಗವಾಗಿ, ಕವಿಪ್ರನಿನಿ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿ (ನೌಕರರು/ಅಧಿಕಾರಿ) ಮತ್ತು ಅವರ ಕುಟುಂಬ ವರ್ಗದವರನ್ನು ಕ್ರೀಯಾಶೀಲವಾಗಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಉಲ್ಲೇಖ 3,4,5,6 ಮತ್ತು 7 ರ ಪತ್ರದಲ್ಲಿ ಕವಿಪ್ರನಿ ನೌಕರರ ಸಂಘ, ಕವಿಮಂ ಇಂಜಿನಿಯರುಗಳ ಸಂಘ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ ಕವಿಪ್ರನಿನಿ ಡಿಪ್ಲೊಮೊ ಇಂಜಿನಿಯರುಗಳ ಸಂಘ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ ಕೇಂದ್ರ ಸಮಿತಿಗಳ ವತಿಯಿಂದ ರಾಜ್ಯದ ಎಲ್ಲಾ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ಕಾರ್ಯಕ್ರಮಕ್ಕೆ ಪ್ರೇರೇಪಿಸುವ ಅಂಗವಾಗಿ ರಾಷ್ಟ್ರಧ್ವಜಕ್ಕೆ ತಗಲುವ ವೆಚ್ಚವನ್ನು ಕವಿಪ್ರನಿನಿ/ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ನೌಕರರು/ಅಧಿಕಾರಿಗಳ ವೇತನದಿಂದ ಕಡಿತಗೊಳಿಸಲು ಸಮ್ಮತಿಯನ್ನು ನೀಡಿರುತ್ತಾರೆ

ಈ ಸಂಬಂಧ, ನಿಗಮ/ಎಸ್ಕಾಂಗಳ ಎಲ್ಲಾ ಬಟವಾಡೆ ಅಧಿಕಾರಿಗಳು ಪ್ರತಿ ನೌಕರ/ಅಧಿಕಾರಿಯಿಂದ ರೂ.50/-(ಐವತ್ತು ರೂಪಾಯಿಗಳು) ರಂತೆ ಜುಲೈ-2022ರ ಮಾಹೆಯ ವೇತನದಲ್ಲಿ ಕಡಿತಗೊಳಿಸಿ, Union Bank of India ಗೆ ನೇರವಾಗಿ ವರ್ಗಾವಣೆ ಮಾಡುವಂತೆ ಈ ಮೂಲಕ ತಿಳಿಸಲಾಗಿದೆ.

**ಬ್ಯಾಂಕ್ ಖಾತೆ ವಿವರ ಈ ಕೆಳಕಂಡಂತಿರುತ್ತದೆ.**

| | | |
|---|---|---|
| **ಕವಿಪ್ರನಿನಿ ಚಾಲ್ತಿ ಖಾತೆ ಸಂಖ್ಯೆ** | : | **510101002827521** |
| **ಬ್ಯಾಂಕ್ ಹೆಸರು** | : | **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ.** |
| **ಐ.ಎಫ್.ಎಸ್.ಸಿ., ಸಂಕೇತ** | : | **UBIN0550230** |
| **ಐ.ಎಂ.ಸಿ.ಆರ್. ಸಂಕೇತ** | : | **560026015** |
| **ಶಾಖೆಯ ವಿಳಾಸ** | : | **ಐ.ಎಫ್.ಬಿ ಶಾಖೆ, ನಂ.10/4, 1ನೇ ಮಹಡಿ, ಮಿತ್ರಾ ಟವರ್ಸ್, ಕಸ್ತೂರಬಾ ರಸ್ತೆ,. ಬೆಂಗಳೂರು-560001.** |

AGM-2
01/08
To upload in website.

ನಿರ್ದೇಶಕರು(ಅ ಮತ್ತು ಮಾ.ಸಂ)
ಕವಿಪ್ರನಿನಿ.

ಆ.ಪು.ನೋ

**ಮೆಮೋ**

**ಕ್ರಮಾಂಕ:ಚಾವಿಸನಿನಿ/ಆ ಮತ್ತು ಮಾ.ಸಂ./05/04/2022-23/** Cys-646 **ದಿನಾಂಕ:** 1 AUG 2022

ನಿರ್ದೇಶಕರು(ಆ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರುರವರ ಸುತ್ತೋಲೆ ಪತ್ರ ಸಂಖ್ಯೆ:ಕವಿಪ್ರನಿನಿ/ಬಿ110/ 37111/2022-23 ದಿನಾಂಕ:21.07.2022ರ ಸುತ್ತೋಲೆಯನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾ.ವಿ.ಸ.ನಿ.ನಿ., ಮೈಸೂರು.

**ಪ್ರತಿಗಳು:**

- ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ., ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ., ಹಾಸನ/ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿರವರ ಮಾಹಿತಿಗಾಗಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.,ರವರ ಮಾಹಿತಿಗಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರುರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ.ನಿ), ನಿಗಮ ಕಛೇರಿ, ಚಾವಿಸನಿನಿ., ಮೈಸೂರು ಇವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪ್ರತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ ಮುಖ್ಯ ಆರ್ಥಿಕ ಸಲಹೆಗಾರರುರವರ ಗಮನಕ್ಕೆ ತರುವಂತೆ ಕೋರಿದೆ.
- ಸ-2(ಆ ಮತ್ತು ಮಾ.ಸಂ)/ಪ್ರ.ಕ.